(ಇ) ಈ ರೀತಿ ಕಾರ್ಯಭಾರವನ್ನು ನಿರ್ವಹಿಸಲು ಅವಕಾಶ ಮಾಡಿಕೊಟ್ಟ ರೇಷ್ಮೆ ಕೃಷಿ ಅಭಿವೃದ್ಧಿ ಮುಖ್ಯಸ್ಥರು ತಪ್ಪು ನಿರ್ಧಾರಗಳಿಂದಾಗಿ ಈ ರೋಗ ಹರಡಲು ಕಾರಣಕರ್ತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು) :

(ಅ) ನಿಜವಲ್ಲ

ಹೌದು

(ಆ) ಇಲ್ಲ

(ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ರೇಷ್ಮೆ ವಸ್ತ್ರಗಳ ಮಾರಾಟ ಮಳಿಗೆಯ ನವೀಕರಣಕ್ಕಾಗಿ ಮಾಡಿದ ಖರ್ಚು

1605 (1952) : ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಬೆಂಗಳೂರು ನಗರದ ಕೆಂಪೇಗೌಡ ರಸ್ತೆಯ ಜನತಾ ಬಜಾರ್ ಆವರಣದಲ್ಲಿರುವ ಸರ್ಕಾರಿ ಹುರಿ ಮತ್ತು ನೇಯ್ಗೆ ಕಾರ್ಖಾನೆ, ಮುಡಿಗುಂಡಂನಲ್ಲಿ ಉತ್ಪಾದಿಸಲಾದ ರೇಷ್ಮೆ ವಸ್ತ್ರಗಳ ಮಾರಾಟ ಮಳಿಗೆಯನ್ನು ಈ ಹಿಂದೆ ಸುಮಾರು 10 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ವಿನ್ಯಾಸಗೊಳಿಸಿರುವುದು ನಿಜವಲ್ಲವೇ? ಸದರಿ ಮಳಿಗೆಯನ್ನು ಪುನಃ 1999ನೇ ಸಾಲಿನಲ್ಲಿ ಸುಮಾರು 6 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ವಿನ್ಯಾಸಗೊಳಿಸಲು ಕಾರಣವೇನು? ವಿನ್ಯಾಸಗೊಳಿಸಲು ಟೆಂಡರ್ ಕರೆಯಲಾಗಿದೆಯೇ; ಅಥವಾ ಸರ್ಕಾರ ಈ ಬಗ್ಗೆ ಅನುಮೋದನೆ ನೀಡಲಾಗಿದೆಯೇ (ವಿವರ ನೀಡುವುದು)

(ಆ) ವಿನ್ಯಾಸಗೊಳಿಸುವ ಪೂರ್ವದಲ್ಲಿ ಪ್ರತಿತಿಂಗಳು ಮಾರಾಟದಿಂದ ಬರುತ್ತಿದ್ದ ಹಣವೆಷ್ಟು; ಹಾಗೂ ವಿನ್ಯಾಸಗೊಳಿಸುವ ಪೂರ್ವಕ್ಕಿಂತಲೂ ಈಗ ಅಂದರೆ ಆಗಸ್ಟ್ ಮಾಹೆಯಲ್ಲಿ ನಿಗದಿಪಡಿಸಿದ ಮಾರಾಟ ದರ ದ್ವಿಗುಣಗೊಳಿಸಿರುವುದು ನಿಜವಲ್ಲವೇ; ಇದರಿಂದಾಗಿ ಗ್ರಾಹಕರಿಗೆ ವಂಚನೆ ಮಾಡಿದಂತಾಗುವುದಿಲ್ಲವೇ ಹಾಗೂ ಅದಕ್ಕಾಗಿ ಸರ್ಕಾರ ಆದೇಶವೇನಾದರೂ ನೀಡಲಾಗಿದೆಯೇ?

(ಇ) ಹಾಗಿದ್ದಲ್ಲಿ ಇದರ ಮುಖ್ಯಸ್ಥರು ಏಕಾಏಕಿಯಾಗಿ ದರವನ್ನು ದ್ವಿಗುಣಗೊಳಿಸಲು ಕಾರಣವೇನು? ಈ ಸಂಬಂಧದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಂ. ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು) :

(ಅ) ಇಲ್ಲ. ಸರ್ಕಾರಿ ರೇಷ್ಮೆ ಪರಿಷ್ಕರಣಾ ಮತ್ತು ಪರೀಕ್ಷಾ ಕೇಂದ್ರದ ಕಛೇರಿಯ ಒಂದು ಭಾಗವನ್ನು ರೇಷ್ಮೆ ವಸ್ತ್ರಗಳ ಮಾರಾಟ ಮಳಿಗೆಯನ್ನಾಗಿ ವಿನ್ಯಾಸಗೊಳಿಸಲು 1993-94ನೇ ಸಾಲಿನಲ್ಲಿ ರೂ. 6.60 ಲಕ್ಷ ಖರ್ಚು ಮಾಡಲಾಗಿದೆ. 1999-2000ನೇ ಸಾಲಿನಲ್ಲಿ ಅಂದರೆ

ಆರು ವರ್ಷಗಳ ನಂತರ ಸದರಿ ಮಳಿಗೆಯನ್ನು ಅಲಂಕರಣಗೊಳಿಸಿ ಸುತ್ತಮುತ್ತಲಿರುವ ರೇಷ್ಮೆ ಮಳಿಗೆಗಳಿಗೆ ಪೈಪೋಟಿಯನ್ನು ಒಡ್ಡಿ ಮುಡಿಗುಂಡಂ ನೇಯ್ಗೆ ಕಾರ್ಖಾನೆಯ ವಸ್ತ್ರಗಳನ್ನು ಜನಪ್ರಿಯಗೊಳಿಸಲು ಹಾಗೂ ಮಾರಾಟವನ್ನು ಹೆಚ್ಚಿಸಲು ವಿನ್ಯಾಸಗೊಳಿಸಲಾಗಿದೆ. ಇದಕ್ಕೆ ರೂ. 2.93 ಲಕ್ಷಗಳನ್ನು ಖರ್ಚು ಮಾಡಲಾಗಿದೆ. ಈ ಖರ್ಚನ್ನು ನಿಯಮಾನುಸಾರ ಮಾಡಲಾಗಿದೆ.

(ಆ) ರೇಷ್ಮೆ ವಸ್ತ್ರಗಳ ಮಾರಾಟದ ವಿವರಗಳನ್ನು ಮಾಹೆವಾರು ಅನುಬಂಧದಲ್ಲಿ ನೀಡಿದೆ. ಆಗಸ್ಟ್ 1999ರ ತರುವಾಯದ ಕೆಲವು ಮಾಹೆಗಳಲ್ಲಿ ಮಾರಾಟದಿಂದ ಹೆಚ್ಚು ಹಣ ಬಂದಿರುತ್ತದೆ.

ರೇಷ್ಮೆ ವಸ್ತ್ರಗಳ ಮಾರಾಟ ಬೆಲೆಯನ್ನು ದಿನಾಂಕ: 1-10-1999 ರಂದು ಪರಿಷ್ಕರಿಸಲಾಯಿತು. ಈ ರೀತಿ ಪರಿಷ್ಕರಿಸುವಾಗ ಸರ್ಕಾರಿ ರೇಷ್ಮೆ ಹುರಿ ಹಾಗೂ ನೇಯ್ಗೆ ಕಾರ್ಖಾನೆಯಲ್ಲಿ ಈಗಿನ ಉತ್ಪಾದನಾ ವೆಚ್ಚವನ್ನು ಗಣನೆಗೆ ತೆಗೆದುಕೊಂಡು ದರವನ್ನು ಪರಿಷ್ಕರಿಸಲಾಗಿದೆ. ಇದರಿಂದ ಗ್ರಾಹಕರಿಗೆ ಯಾವುದೇ ವಂಚನೆ ಆಗಿರುವುದಿಲ್ಲ.

(ಇ) ಪ್ರಶ್ನೆ 'ಆ' ನಲ್ಲಿ ಒದಗಿಸಿರುವ ಉತ್ತರ ಇದಕ್ಕೂ ಅನ್ವಯಿಸುತ್ತದೆ.

ಅನುಬಂಧ

ಬೆಂಗಳೂರಿನ ರೇಷ್ಮೆ ವಸ್ತ್ರಗಳ ಮಾರಾಟ ಮಳಿಗೆಯಲ್ಲಿ ಜನವರಿ 1999 ರಿಂದ ಮಾರ್ಚ್ 2000 ದವರೆವಿಗೆ ರೇಷ್ಮೆ ವಸ್ತ್ರಗಳ ಮಾರಾಟದ ವಿವರಗಳು (ಮಾಹೆವಾರು)

ಕ್ರಮ ಸಂಖ್ಯೆ	ಮಾಹೆ	ಮಾರಾಟದ ವಿವರಗಳು	
		ಮೀಟರುಗಳಲ್ಲಿ	ಲಕ್ಷ ರೂ. ಗಳಲ್ಲಿ
02	ಫೆಬ್ರವರಿ 1999	524.85	1.05
03	ಮಾರ್ಚ್ 1999	262.60	0.60
04	ಏಪ್ರಿಲ್ 1999	366.30	0.82
05	ಮೇ 1999	568.30	1.42
06	ಜೂನ್ 1999	652.65	1.59
07	ಜುಲೈ 1999	470.50	1.16
08	ಆಗಸ್ಟ್ 1999	595.35	1.53
09	ಸೆಪ್ಟೆಂಬರ್ 1999	564.60	1.45
10	ಅಕ್ಟೋಬರ್ 1999	447.85	1.84
11	ನವೆಂಬರ್ 1999	329.65	1.38

12	ನವೆಂಬರ್ 1999	386.30	1.54
13	ಜನವರಿ 2000	327.45	1.29
14	ಫೆಬ್ರವರಿ 2000	414.99	1.60
15	ಮಾರ್ಚ್ 2000	416.99	1.64

ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ 5 ವರ್ಷದಲ್ಲಿ ತೋಡಿದ ಬಾವಿ

1606 (2445) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ):- ಮಾನ್ಯ ಸಮಾಜ ಕಲ್ಯಾಣ ಸಚಿವರು

ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ ರಾಜ್ಯಾದಾದ್ಯಾಂತ ಗಂಗಾ ಕಲ್ಯಾಣ ಯೋಜನೆಯಲ್ಲಿ ಕಳೆದ 5 ವರ್ಷಗಳಲ್ಲಿ ತೋಡಿದ ಬಾವಿಗಳ ಸಂಖ್ಯೆ ಜಿಲ್ಲಾವಾರು ವಿವರ ಒದಗಿಸುವುದು;

ಆ) ಈ ಯೋಜನೆಯಲ್ಲಿ 1) ತೀರ್ಥಹಳ್ಳಿ 2) ಹೊಸನಗರ 3) ಸಾಗರ ತಾಲ್ಲೂಕುಗಳಲ್ಲಿ 3 ವರ್ಷದಲ್ಲಿ ತೋಡಿದ ಬಾವಿಗಳ ಸಂಖ್ಯೆ ಎಷ್ಟು;

ಇ) ಮಲೆನಾಡು ತಾಲ್ಲೂಕುಗಳಲ್ಲಿ ಕೊಳವೆ ಬಾವಿ ಯಶಸ್ವಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಬದಲಿಗೆ ತೆರೆದಬಾವಿ ತೋಡಲು (ಮಲೆನಾಡು ತಾಲ್ಲೂಕು) ಸರ್ಕಾರ ಅನುಮತಿ ಕೊಡಲು ಯೋಜಿಸಿದೆಯೇ?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಕರ್ನಾಟಕ ಪರಿಶಿಷ್ಟ ಜಾತಿಃಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದಿಂದ ಗಂಗಾ ಕಲ್ಯಾಣ ಯೋಜನೆಯಡಿ ರಾಜ್ಯಾದ್ಯಂತ 9656 ಯಶಸ್ವಿ ಕೊಳವೆಬಾವಿಗಳನ್ನು ಕೊರೆಯಲಾಗಿದೆ. ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ನಿಗಮದಿಂದ ತೀರ್ಥಹಳ್ಳಿ ಹೊಸನಗರ ಮತ್ತು ಸಾಗರ ತಾಲ್ಲೂಕುಗಳಲ್ಲಿ ಯಾವುದೇ ಯಶಸ್ವಿ ಕೊಳವೆಬಾವಿಗಳನ್ನು ಕೊರೆದಿರುವುದಿಲ್ಲ.

ಇ) ಹೌದು, ಪರಿಶೀಲನೆಯಲ್ಲಿದೆ.